# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 666(729) |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಐವನ್ ಡಿ' ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ಸಚಿವರು** | : | ಉನ್ನತ ಶಿಕ್ಷಣ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | : | 16.12.2024 |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಎಷ್ಟು ಖಾಸಗಿ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದೆ; ಇದರಿಂದ ಸರ್ಕಾರಕ್ಕೆ ಆರ್ಥಿಕವಾಗಿ ಲಾಭವಾಗಿದೆಯೇ; ಹೆಚ್ಚುವರಿಯಾಗಿ ಎಷ್ಟು ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗುವುದು; ಈ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;</td><td>
ಕರ್ನಾಟಕ ರಾಜ್ಯದಲ್ಲಿ 30 ಖಾಸಗಿ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದೆ.
ಖಾಸಗಿ ವಿಶ್ವವಿದ್ಯಾಲಯಗಳ ಹಲವಾರು ಪ್ರಕ್ರಿಯೆಗಳ ಸಂಬಂಧದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 449 ಯುಆರ್‌ಸಿ 2016, ದಿನಾಂಕ: 24.01.2017ರಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ವಯ ನಿಗದಿಪಡಿಸಲಾಗಿರುವ ಸೇವಾ ಶುಲ್ಕವನ್ನು ಸರ್ಕಾರದ ಅಧೀನದ ಸಂಸ್ಥೆಯಾದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಕೆಳಕಂಡಂತೆ ಪಾವತಿಸಬೇಕಾಗುತ್ತದೆ.
<table>
<tr><th>ಕ್ರ. ಸಂ.</th><th>ಪ್ರಕ್ರಿಯೆ / ಸೇವೆ</th><th colspan="2">ನಿಗದಿಪಡಿ ಸಲಾಗಿರುವ ಶುಲ್ಕ</th></tr>
<tr><td>1.</td><td>ವಿಶ್ವವಿದ್ಯಾಲಯದ ಸ್ಥಾಪನೆ ಪ್ರಕ್ರಿಯೆಗೆ</td><td colspan="2">ರೂ.10.00 ಲಕ್ಷಗಳು</td></tr>
<tr><td>2.</td><td>ಹೊಸ ಕೋರ್ಸುಗಳನ್ನು ಆರಂಭಿಸಲು, ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಮತ್ತು ಕಡಿಮೆ ಮಾಡಲು ಪ್ರತಿ ಕೋರ್ಸಿಗೆ ನಿಗದಿಪಡಿಸಿದ ಶುಲ್ಕ.</td><td colspan="2">ರೂ. 50,000/- ಗಳು.</td></tr>
<tr><td rowspan="2">3.</td><td rowspan="2">ಖಾಸಗಿ ವಿಶ್ವವಿದ್ಯಾಲಯಗಳ ನಿಯತಕಾಲಿಕ ಪರಿವೀಕ್ಷಣೆಗೆ</td><td>3 ವರ್ಷಗಳಿಗೆ ಒಮ್ಮೆ</td><td>ರೂ.3.00ಲಕ್ಷ</td></tr>
<tr><td>5 ವರ್ಷಗಳಿಗೆ ಒಮ್ಮೆ</td><td>ರೂ.5.00ಲಕ್ಷ</td></tr>
</table>
ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಎರಡು ವ್ಯವಸ್ಥಾಪನಾ ಮಂಡಳಿಯಿಂದ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಖಾಸಗಿ ವಿಶ್ವವಿದ್ಯಾಲಯದ ಅಧಿನಿಯಮದಲ್ಲಿನ ಅವಕಾಶಗಳನ್ವಯ ಪರಿಶೀಲಿಸಲಾಗುತ್ತಿದೆ.
</td></tr>
<tr><td>(ಆ)</td><td>ಖಾಸಗಿ ವಿಶ್ವವಿದ್ಯಾಲಯ ಹೆಚ್ಚಳದಿಂದ ಸರ್ಕಾರದ ಅಧೀನದಲ್ಲಿರುವ ವಿಶ್ವವಿದ್ಯಾಲಯಗಳು ಆರ್ಥಿಕ ನಷ್ಟ ಅನುಭವಿಸಲು ಕಾರಣವಾಗಿದ್ದು, ಇಲಾಖೆ ಈ ಬಗ್ಗೆ ಕೈಗೊಂಡ ಕ್ರಮವೇನು;</td><td>ಖಾಸಗಿ ವಿಶ್ವವಿದ್ಯಾಲಯಗಳ ಹೆಚ್ಚಳದಿಂದ ಸರ್ಕಾರದ ಅಧೀನದಲ್ಲಿರುವ ವಿಶ್ವವಿದ್ಯಾಲಯಗಳ ಆರ್ಥಿಕ ನಷ್ಟದ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.</td></tr>
</table>

| | | |
|---|---|---|
| (ಇ) | ಖಾಸಗಿ ವಿಶ್ವವಿದ್ಯಾನಿಲಗಳನ್ನು ತಡೆಯಲು ಇಲಾಖೆಗೆ ಇರುವ ಅಧಿಕಾರವೇನು; (ವಿವರ ನೀಡುವುದು) | ಖಾಸಗಿ ವಿಶ್ವವಿದ್ಯಾಲಯದಲ್ಲಿ ದುರ್ವ್ಯವಹರಣೆ ಅಥವಾ ದುರಾಡಳಿತ ಕಂಡುಬಂದಲ್ಲಿ ದಂಡನೆಯನ್ನು ವಿಧಿಸಲು, ಆಡಳಿತಾಧಿಕಾರಿಯನ್ನು ನೇಮಿಸಲು ಅಥವಾ ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸಲು ಸರ್ಕಾರದಲ್ಲಿ ಅಧಿಕಾರ ನಿಹಿತವಾಗಿರುತ್ತದೆ. |
| (ಈ) | ರಾಜ್ಯದಲ್ಲಿ ಒಟ್ಟು ಎಷ್ಟು ಸ್ವಾಯತ್ತ (Autonomous) ಕಾಲೇಜುಗಳು ಕಾರ್ಯನಿರ್ವಹಿಸುತ್ತಿದೆ; ಇವುಗಳಿಂದ ಸರ್ಕಾರಕ್ಕೆ ಬರುವ ಆರ್ಥಿಕ ಲಾಭವೇನು? (ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 111 ಸ್ವಾಯತ್ತ (Autonomous) ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.<br><br>ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವಂತೆ ವಾರ್ಷಿಕ ಶುಲ್ಕ ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಗುಣವಾಗಿ ಪ್ರವೇಶಾನುಮೋದನೆ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸುತ್ತಾರೆ. |

ಇಡಿ/663/ಯುಆರ್‌ಸಿ/2024

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು.